

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

866666

# ಶರಣೆ ದಾನಮ್ಮನ ತಪೋಕ್ಷೇತ್ರ
# "ಕಲ್ಯಾಣ ಕದಳಿ"

**ನಾರಾಯಣಪೂರದ 'ಗುಣತೀರ್ಥ'ವಾಡಿಯಲ್ಲಿ**

**05 ಮತ್ತು 6ನೇ ಏಪ್ರೀಲ್ 2025 ರಂದು**

**"ಶರಣ ಸಮಾಗಮ" (ಶರಣ ಜ್ಞಾನ ಶಿಬಿರ-2025)**



## ಆಮಂತ್ರಣ ಪತ್ರಿಕೆ

ದಿನಾಂಕ: **15-03-2025** ರಿಂದ **05-04-2025**ರ ವರೆಗೆ **14**ನೇ ಶರಣೆ ದಾನಮ್ಮ ಜ್ಯೋತಿ ಯಾತ್ರೆ ಮತ್ತು ಕಲ್ಯಾಣ ದರ್ಶನ

ಸ್ಥಳ: ಕಲ್ಯಾಣ ಮಹಾಮನೆ; ಮಹಾಮಠ, ಗುಣತೀರ್ಥವಾಡಿ – ತಾ॥ ಬಸವಕಲ್ಯಾಣ – ಜಿ॥ ಬೀದರ

ಶರಣ ಬಂಧುಗಳಲ್ಲಿ ವಿಜ್ಞಾಪನೆಗಳು,

ಹನ್ನೆರಡನೇ ಶತಮಾನವು ಬಸವಾದಿ ಶರಣರ ಸಾಮಾಜೋ-ಧಾರ್ಮಿಕ ಸಮಾನತೆಯನ್ನು ಸಾರಿದ ಸಂಕ್ರಮಣ ಕಾಲ ಎಂದು ಹೇಳಬಹುದು. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ಕಾರ್ತಿಕದ ಕತ್ತಲಲ್ಲಿ ಆಕಾಶ ದೀಪವಾಗಿ ನೀ ಬಂದೆ, ಬಟ್ಟೆಗೆಟ್ಟವರಿಗೊಂದು ದೊಂದು ದಿಕ್ಕಾಗಿ, ಎಂಟು ಶತಮಾನಗಳ ಹಿಂದೆ ಅಗ್ನಿ ಖಡ್ಗವನಾಂತು, ಓ ಆಧ್ಯಾತ್ಮ ಕ್ರಾಂತಿ ವೀರ, ದೇವ ದಯೆಯೊಂದು ಹೇ ಧೀರಾವತಾರ ಶ್ರೀ ಗುರು ಬಸವೇಶ್ವರ. ಸಾಮಾಜಿಕ ಸಮಾನತೆಯಿಲ್ಲದೆ ಅಸಮಾನತೆಯ ಕತ್ತಲ ಕೂಪದಲ್ಲಿ ಶತ ಶತಮಾನಗಳ ಕಾಲ ಬದುಕನ್ನು ನಡೆಸುವವರಿಗೆ ಸೂರ್ಯ ಪ್ರಕಾಶದಂತೆ ಬಂದವರು ಗುರು ಬಸವಣ್ಣನವರು ಎಂಬ ಕುವೆಂಪು ಅವರ ಮಾತು ಅಕ್ಷರಶಃ ಸತ್ಯ ಎನ್ನಿಸುತ್ತದೆ.

ಗುರು ಬಸವಣ್ಣನವರು ಸೂರ್ಯನಾದರೆ ಅನಂತ ಗ್ರಹ ನಕ್ಷತ್ರಗಳಂತೆ ಶರಣರು. ಅಂತಹ 770 ಸತ್ಯ ಶರಣರಲ್ಲಿ ಒಬ್ಬರಾದ ವರದಾನಿ ಶರಣೆ ದಾನಮ್ಮನವರು. ಶರಣೆ ದಾನಮ್ಮನವರು ಕಲ್ಯಾಣಕ್ಕೆ ಬಂದು ಹೋದ ಸ್ಥಳವು ಬಸವಕಲ್ಯಾಣದಿಂದ ಪೂರ್ವಕ್ಕೆ  ನೂತನವಾಗಿ ಶೋಧನೆಗೊಂಡ ಹನ್ನೆರಡನೇ ಶತಮಾನದ ತಪೋಕ್ಷೇತ್ರ, ಕಲ್ಯಾಣ ಕದಳಿ ಬಸವಕಲ್ಯಾಣ ಸಮೀಪ ಪೂರ್ವಕ್ಕೆ ಇರುವ ನಾರಾಯಣಪೂರದ  ಗುಣತೀರ್ಥ ವಾಡಿಯಲ್ಲಿ ಸಿಕ್ಕಿರುವುದು ನಮ್ಮ ಪುಣ್ಯ ಎಂದೇ ಹೇಳಬಹುದು. ಸತ್ಯ ಶರಣರು ಬರುವ ಕಾಲ ಕೂಡಿ ಬಂದಿರುವುದರಿಂದ ಹನ್ನೆರಡನೇ ಶತಮಾನದಲ್ಲಿ ಶರಣರು ತಾವು ಉಳಿದುಕೊಂಡು ಲಿಂಗಾಂಗಯೋಗ ಮಾಡಿದ ಸ್ಥಾನದಿಂದ ಪ್ರಕಟವಾಗುತ್ತಿದ್ದಾರೆ ಎಂಬುದಕ್ಕೆ ಶರಣೆ ದಾನಮ್ಮನ ನಾರಾಯಣಪೂರದ ಗುಣತೀರ್ಥ ವಾಡಿ ಕ್ಷೇತ್ರವೇ  ಸಾಕ್ಷಿಯಾಗಿದೆ.

ಈಗಿನ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆ ಜತ್ ತಾಲೂಕಿನ ಉಮರಾಣಿಯಲ್ಲಿ ತಾಯಿ ಶಿರಸಮ್ಮ ತಂದೆ ಅನಂತರಾಯ ಇವರ ಉದರದಲ್ಲಿ ಜನಿಸಿದ ಲಿಂಗಮ್ಮ ಮುಂದೆ ತಮ್ಮ 18ನೇ ವಯಸ್ಸಿಗೆ ಸೊನ್ನಲಿಗೆಯ ಸಿದ್ದರಾಮೇಶ್ವರರಿಂದ ಲಿಂಗದೀಕ್ಷೆ ಪಡೆದು ದೃಷ್ಟಿಯೋಗ ಕಲಿತು ಉನ್ನತ ಸಾಧನೆ ಮಾಡಲು ಮತ್ತು ಗುರು ಬಸವಾದಿ ಶರಣರ ದರ್ಶನ ಮಾಡಲು ಕಲ್ಯಾಣಕ್ಕೆ ಹೊರಟು ಬರುತ್ತಾರೆ. ಮೊಳಕೇರಾದಲ್ಲಿ ಮೋಳಿಗೆ ಮಾರಯ್ಯನ ದರ್ಶನ ಪಡೆದು ಅವರ ಮಾರ್ಗದರ್ಶನದಂತೆ ನಾರಾಯಣಪುರದ ಗುಣತೀರ್ಥ(ಗುಣತೀರ್ಥವಾಡಿ)ಕ್ಕೆ ಬಂದು ರೋಗದಿಂದ ಬಳಲುತಿದ್ದ ಒಬ್ಬ ಮಹಿಳೆಗೆ ಚಿಕಿತ್ಸೆ ನೀಡುತ್ತಾರೆ. ಗುಣತೀರ್ಥದಲ್ಲಿ ಇರುಓವರೆಗೂ ಪಶ್ಚಿಮಕ್ಕೆ ಇರುವ ಕಲ್ಯಾಣ ಕದಳಿ ಗವಿಯಲ್ಲಿ ಲಿಂಗಾನುಷ್ಠಾನ ಮಾಡುತ್ತಾರೆ.

ಅಂದು ಜನರು ಅಂಟು ರೋಗದಿಂದ ಬಳಲುತ್ತಿರುವಾಗ ಜನರ ಕರೆಗೆ ಓಗೊಟ್ಟು ಸಮೀಪದ ನಾರಾಯಣಪುರಕ್ಕೆ ಹೋಗಿ ಅಲ್ಲಿಯೇ ನೆಲೆ ನಿಂತು ಅವರಿಗೆ ಗಿಡಮೂಲಿಕೆಯಿಂದ ಚಿಕಿತ್ಸೆ ನೀಡಿ ರೋಗಮುಕ್ತ ಗ್ರಾಮವನ್ನಾಗಿಸುತ್ತಾರೆ. ಇದೆ ಊರಿನ ಕೆರೆ ಪಕ್ಕದಲ್ಲಿ ಉಳಿದುಕೊಂಡು ಮನೆ ಮನೆಗೆ ತೆರಳಿ ಮುಷ್ಟಿ ಅಕ್ಕಿ ಸಂಗ್ರಹಿಸಿ ಕಾಯಕ-ದಾಸೋಹ ನೆರವೇರಿಸುತ್ತಾರೆ. ಲಿಂಗಮ್ಮನ ಕೀರ್ತಿ ಕಲ್ಯಾಣಕ್ಕೂ ಹಬ್ಬಿ, ಗುರು ಬಸವಣ್ಣನವರ ಕಿವಿಗೂ ತಲುಪುತ್ತದೆ. ಬಸವಣ್ಣನವರು ದಾನಮ್ಮನ ನಿಸ್ವಾರ್ಥ ದಾಸೋಹ ಸೇವೆಯನ್ನು ಗುರುತಿಸಿ 'ದಾನಮ್ಮ'ನೆಂದು ಹೆಸರು ನೀಡುತ್ತಾರೆ.

ಅಂದಿನಿಂದ ದಾನಮ್ಮನ ಕೀರ್ತಿ ಮತ್ತಷ್ಟು ಹೆಚ್ಚಾಗುತ್ತದೆ. ದಾನಮ್ಮನು ತನ್ನ ಸಂಕಲ್ಪದಂತೆ ಇದೇ ಸ್ಥಳದಲ್ಲಿ ಲಕ್ಷದ ಮೇಲೆ ತೊಂಭತ್ತಾರು ಶರಣರಿಗೆ ದಾಸೋಹ ಮಾಡಿ ಕಲ್ಯಾಣಕ್ಕೆ ಬರುವ ಇಚ್ಛೆಯನ್ನು ಬಸವಣ್ಣನವರಲ್ಲಿ ವ್ಯಕ್ತ ಪಡಿಸುತ್ತಾರೆ ಆಗ ಬಸವಣ್ಣನವರು ಆ ತಾಯಿಯ ಆಸೆಯಂತೆ ಒಪ್ಪಿಗೆ ನೀಡಿ ದಾಸೋಹ ಕಾರ್ಯ ಮುಗಿದ ಮೇಲೆ ಮೆರವಣಿಗೆ ಸಮೇತ ದಾನಮ್ಮನನ್ನು ಸತ್ಕರಿಸಿ ಕಲ್ಯಾಣಕ್ಕೆ ಕರೆದುಕೊಂಡು ಹೋಗುತ್ತಾರೆ. ಕಲ್ಯಾಣದಲ್ಲಿ ಒಂದು ವರ್ಷಗಳ ಕಾಲ ಅನುಭವ ಮಂಟಪದಲ್ಲಿದ್ದು ಪುನಃ ಉಮರಾಣಿಗೆ ತೆರಳುತ್ತಾರೆ. ಗುರು ಬಸವಣ್ಣನವರ ಆದೇಶದಂತೆ ದಾಂಪತ್ಯ ಜೀವನವನ್ನು ಸ್ವೀಕರಿಸಲು ಒಪ್ಪುತ್ತಾರೆ. ಸಂಖ ಊರಿನ ಸೋಮನಾಥನನ್ನು ಮದುವೆಯಾಗುತ್ತಾರೆ. ಮದುವೆ ನಂತರ ಅಖಂಡ ಭಾರತ ವನ್ನು ಸುತ್ತಾಡಿ ಸರ್ವರನ್ನೂ ಅಪ್ಪ ಬೊಪ್ಪ ಎನ್ನಪ್ಪ ಎಂದು ಅಪ್ಪಿಕೊಳ್ಳುವ ಬಸವಧರ್ಮದ ಪ್ರಚಾರ ಕೈಗೊಂಡು ಸಹಸ್ರ ಸಹಸ್ರ ಜನಗಳಿಗೆ ಲಿಂಗದೀಕ್ಷೆ ಸಂಸ್ಕಾರ ನೀಡುತ್ತಾರೆ. ಕೊನೆಯದಾಗಿ ಗುಡ್ಡಾಪೂರದಲ್ಲಿ ನೆಲೆ ನಿಂತು ಸಾಮಾಜಿಕ ಮಾನವೀಯ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳುತ್ತಾರೆ. ದಾನಮ್ಮ ತಾಯಿಯವರು ಆ ಕಾಲದಲ್ಲಿಯೇ 500ಕ್ಕು ಹೆಚ್ಚು ಉಚಿತ ಸಾಮೂಹಿಕ ಮದುವೆ ಮಾಡಿಸಿ ಶರಣ ಧರ್ಮವು ಸಂಸಾರ ಧರ್ಮ ಎಂಬುದನ್ನು ಸಾಬೀತು ಮಾಡಿದ್ದಾರೆ. ದೇವನಿತ್ತ ಮಣಿಹವನ್ನು ಪೂರೈಸಿ ಶರಣೆ ದಾನಮ್ಮನವರು ಗುಡ್ಡಾಪೂರದಲ್ಲಿಯೇ ಲಿಂಗೈಕ್ಯರಾಗುತ್ತಾರೆ. ಭಕ್ತಿಯಿಂದ ಸ್ಮರಿಸುವ ಲಕ್ಷಾಂತರ ಶರಣ ಸದ್ಭಕ್ತರನ್ನು ಆತ್ಮಿಕವಾಗಿ ಆಶೀರ್ವದಿಸುತ್ತಾರೆ, ಅವರ ಸಂಕಲ್ಪವನ್ನು ಈಡೇರಿಸುವದಕ್ಕಾಗಿ ವರದಾನಿ ಎಂದೇ ಕೀರ್ತಿ ಹೊಂದಿದ್ದಾರೆ.

ಇಂತಹ ಸತ್ಯವುಳ್ಳ ಪರಮ ದಾಸೋಹಿ ವರದಾನಿ ದಾನಮ್ಮನವರು. ಅವರು ನಡೆದಾಡಿ ಅನುಷ್ಠಾನ ಗೈದ ಐತಿಹಾಸಿಕ ನಾರಾಯಣಪೂರದ ಗುಣತೀರ್ಥ ವಾಡಿ ಕಲ್ಯಾಣ ಕದಳಿಯ, ಕಲ್ಯಾಣ ಮಹಾಮನೆಯಲ್ಲಿ ವರದಾನಿ ಶರಣೆ ದಾನಮ್ಮನ ಮತ್ತು ವಿಶ್ವಗುರು ಬಸವಣ್ಣನವರ ವಿಚಾರಗಳ ಸ್ಮರಣೆಗಾಗಿ ಪ್ರಥಮ ಶರಣ ಸಮಾಗಮ ಕಾರ್ಯಕ್ರಮವನ್ನು(ಶರಣ ಜ್ಞಾನ ಶಿಬಿರ) ಏಪ್ರಿಲ್ 5, 6 ರಂದು ಹಮ್ಮಿಕೊಳ್ಳಲಾಗಿದೆ. ಶರಣೆ ದಾನಮ್ಮನವರು ಯುಗಾದಿ ಪಾಡ್ಯದಂದು ಕಲ್ಯಾಣ ಪ್ರವೇಶ ಮಾಡಿದ ಸವಿ ನೆನೆಪಿಗಾಗಿ ಆ ಶರಣೆಯನ್ನು ಸ್ಮರಣೆ ಮಾಡುವ ನಿಮಿತ್ಯ ದಿನಾಂಕ 15-03-2025 ರಿಂದ 5-04-2025ರವೆರೆಗೆ 14ನೇ ಶರಣೆ ದಾನಮ್ಮಜ್ಯೋತಿ ಯಾತ್ರೆಯನ್ನು ಕಲ್ಯಾಣ ಮಹಾಮನೆ ಮತ್ತು ನಾರಾಯಣಪುರದ ಗುಣತೀರ್ಥ ವಾಡಿ ಸದ್ಭಕ್ತ ಮಂಡಳಿ ವತಿಯಿಂದ ಗುಡ್ಡಾಪೂರದಿಂದ ನಾರಾಯಣಪೂರದ ಗುಣತೀರ್ಥ ವಾಡಿಯವರೆಗೆ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮಕ್ಕೆ ನಾಡಿನ ಚಿಂತಕರು, ಸಾಹಿತಿಗಳು, ಅನುಭಾವಿಗಳು, ಮಠಾಧೀಶರು, ಶರಣ-ಶರಣೆ ಯರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಆಗಮಿಸಲಿದ್ದಾರೆ. ಸರ್ವರೂ ತನು ಮನ ದನ ಸಹಕಾರದೊಂದಿಗೆ ಸಹ ಕುಟುಂಬ ಸಮೇತ ಭಾಗಿಯಾಗಿ ವಿಶ್ವಗುರು ಬಸವಣ್ಣನವರ ಮತ್ತು ಗುಡ್ಡಾಪೂರು, ಗುಣತೀರ್ಥ ಶರಣೆ ದಾನಮ್ಮ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ.

**|| ಶರಣರ ಬರುವೆಮಗೆ ಪ್ರಾಣ ಜೀವಾಳ ||**

**ಕಲ್ಯಾಣ ಮಹಾಮನೆ ಚಾರಿಟೇಬಲ್ ಟ್ರಸ್ಟ್ (ರಿ)**

ಕಲ್ಯಾಣ ಮಹಾಮನೆ; ಮಹಾಮಠ, ಗುಣತೀರ್ಥವಾಡಿ – ಪೋಸ್ಟ್ : ನಾರಾಯಣಪೂರ – 585327.

ತಾ॥ ಬಸವಕಲ್ಯಾಣ **Cell: 9663841019, Phone pay: 9480497346**

ರಾಮಲಿಂಗೇಶ್ವರ-9448000710



॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

866666

# ಶರಣ ಸಮಾಗಮ ಜ್ಞಾನ ಶಿಬಿರ 2025

ಶರಣ ಬಂಧುಗಳಲ್ಲಿ ವಿಜ್ಞಾಪನೆಗಳು,

ಹನ್ನೆರಡನೇ ಶತಮಾನದಲ್ಲಿ ಗುರು ಬಸವಣ್ಣನವರು ಮತ್ತು ಸಮಕಾಲೀನ ಶರಣರು ರಚಿಸಿಕೊಟ್ಟ ವಚನ ಸಾಹಿತ್ಯವು ವಿನೂತನ ಶರಣ ಸಿದ್ಧಾಂತವನ್ನೇ ಹುಟ್ಟುಹಾಕಿ ಶರಣ ಮಾರ್ಗದಲ್ಲಿ ನಡೆ-ನುಡಿ ಒಂದಾಗಿಸಿ ನಡೆಯಲು ಪ್ರೇರಣೆ ನೀಡುತ್ತದೆ. ಬಸವಾದಿ ಪ್ರಮಥರು ಸಾಂಸರಿಕ ಪಥವನ್ನನುಸರಿಸಿ, ನೈತಿಕತೆಯ ತಳಹದಿಯ ಮೇಲೆ ಮಾನವೀಯತೆಯನ್ನು ಮತ್ತು ಆಧ್ಯಾತ್ಮಿಕತೆಯನ್ನು ಬೋಧಿಸಿದರು. ಸಂಸಾರಿ-ಸನ್ಯಾಸಿ ಎಂಬ ಆಶ್ರಮ ಬೇಧ, ಜಾತಿ, ಮತ, ಪಂಥ, ಪಂಗಡ ಎಂಬ ವರ್ಣ ಬೇಧ, ಹೆಣ್ಣು ಗಂಡು ಎಂಬ  ಲಿಂಗ ಬೇಧ, ಬಡವ ಶ್ರೀಮಂತ ಎಂಬ ವರ್ಗ ಬೇಧವಿಲ್ಲದೆ ಸರ್ವರಿಗೂ ನಿರಕಾರ ನಿರ್ಗುಣ ಲಿಂಗದೇವನ  ಪರಮಾನಂದವನ್ನು ಉಣಬಡಿಸಿದರು. ಪಂಚಭೂತಗಳನ್ನು ಸೃಷ್ಟಿಸಿದ ಪರಮಾತ್ಮನಿಗೆ ಪಂಚಭೂತಗಳ ಆಕಾರ ಕೊಟ್ಟು ಮೂಢನಂಬಿಕೆಗಳನ್ನು ಸೃಷ್ಟಿಸಿದ ಮಾನವನ ಅಜ್ಞಾನಕ್ಕೆ ಮರುಗಿದ ಗುರು ಬಸವಣ್ಣನವರು ಜಗದಗಲ, ಮಿಗಿಲಗಲ, ಮುಗಿಲಗಲನಾದ, ವಿಶ್ವಕ್ಕತೀತನಾದ ಪರಬ್ರಹ್ಮ ಪರಶಿವನಾದ ಲಿಂಗದೇವನ ಜ್ಞಾನ ಪಡೆದು ಭಕ್ತಿಯಿಂದ ಪ್ರಾರ್ಥಿಸಿ, ಧ್ಯಾನಿಸಿ ಏಕಾಂತ ಜೀವನದಲ್ಲಿ ಕಾಲಾಹರಣ ಮಾಡದೆ ಅಂತೀಮವಾಗಿ ಸಮೂಹ ಜ್ಞಾನಿದೊಂದಿಗೆ ಮಾನವೀಯತೆಯ ಸದ್ಗುಣಗಳಿಂದ ಸಮಾಜವೇ ಪರಮಾತ್ಮ ಎಂಬ ಸತ್ಯವನ್ನು ಕಂಡುಕೊಂಡು ಸಮಾಜ ಸೇವೆಗಾಗಿ ಹಂಬಲಿಸಿದರಲ್ಲದೆ ಕಿಂಕರರಾಗಿ ಆಚರಣೆಗೆ ತೊಡಗಿಸಿಕೊಂಡರು. ಅತೀಮಾನುಷ ಕಲ್ಪನೆಯಿಂದ ದೇವರು ಧರ್ಮದ ಮೇಲೆ ಹೆಣೆದ ಸಾಂಪ್ರಾದಯಿಕ ಮಡಿವಂತಿಕೆಯ ಆಚರಣೆಗಳನ್ನು ದಿಕ್ಕರಿಸಿ ದೈಹಿಕ, ಮಾನಸಿಕ, ಬೌದ್ಧಿಕ ದಾರಿದ್ರ್ಯತನದಿಂದ ಹೊರಬರುವಂತೆ ತಮ್ಮ ವಚನವಾಣಿ ಮೂಲಕ ಸಂದೇಶ ಸಾರಿದರು. ಜಗತ್ತಿನ ಒಡೆಯನಾದ ಲಿಂಗದೇವನನ್ನು ಜಡವಸ್ತುಗಳಿಂದ ಪೂಜಿಸಿದರೆ ದೇವನಿಗೆ ಅಪಚಾರ ಮಾಡಿದಂತೆ ಎಂದರಿತ ಬಸವಣ್ಣನವರು ತನ್ನಂತೆ ಜೀವ ಹೊಂದಿದ ಜೀವಾತ್ಮರುಗಳನ್ನು ಆಧ್ಯಾತ್ಮಿಕ ಅನುಭೂತಿಯಿಂದ ಮತ್ತು ಸಾಮಾಜಿಕ ಮಾನವೀಯತೆಯಿಂದ ಗೌರವಿಸಿದರು.

ಆದರೆ ಇಂದು  ಗುರು ಬಸವಣ್ಣನವರನ್ನು ಸಂಘ-ಸಂಸ್ಥೆಗಳ ಮಟ್ಟಕ್ಕೆ ಮಾತ್ರ ಸೀಮಿತಗೊಳಿಸಿ ಜನ ಸಾಮಾನ್ಯ ರಿಂದ ಬಹುದೂರ ಕೊಂಡೊಯ್ಯಲಾಗಿದೆ ಅವರು ಬೋಧಿಸಿದ ಮಾನವೀಯತೆ ಮತ್ತು ಆಧ್ಯಾತ್ಮಿಕತೆಯ ಶರಣ ಮಾರ್ಗವನ್ನು ಬಿಟ್ಟು ಕೇವಲ ಒಂದು ಸಮುದಾಯದವರಿಗೆ ಮಾತ್ರ ಬಸವಣ್ಣನವರ ಬೇಕಾಗಿದೆ ಎಂಬಂತೆ ವಿಚಾರ ಧಾರೆಗಳನ್ನು ಎಣೆಯಲಾಗಿದ್ದು ಶೋಚನೀಯ.

ಇದು ಒಂದು ಕಡೆಯಾದರೆ ಇನ್ನೊಂದು ಕಡೆ ಗುರು ಬಸವಣ್ಣನವರ ಭಾವಚಿತ್ರ, ಮೂರ್ತಿಗಳು ಪೂಜೆಗೆ ಮಾತ್ರ ಸೀಮಿತವಾಗಿರಿಸಿದ್ದೇವೆ ಆಚರಣೆ ಮಾತ್ರ ಶೂನ್ಯವಾಗಿದೆ. ಆದ್ದರಿಂದ ಇಂದು ನಾವು ಬಸವಾದಿ ಶರಣರು ನೀಡಿದ ಮಾನವೀಯ ಮತ್ತು ಶರಣಜ್ಞಾನ ವಿಚಾರಗಳಿಂದ ಕೂಡಿದ ವಚನಗಳ ಸಂದೇಶಗಳನ್ನು ಮನುಕುಲದ ಒಳಿತಿಗಾಗಿ ಅವುಗಳನ್ನು ಬಳಸುತ್ತಾ, ಶ್ರೇಷ್ಠ ಶರಣ ಸಮಾಜವನ್ನು ನಿರ್ಮಾಣ ಮಾಡಬೇಕಾಗಿದೆ; ಈ ನಿಟ್ಟಿನಲ್ಲಿ ವಿನೂತನವಾದ ಪ್ರಚಾರಕ್ಕೆ ನಾವು ಸಿದ್ಧತೆ ಮಾಡಿಕೊಳ್ಳಬೇಕಾಗಿದೆ.

ವಿಶ್ವಗುರು ಬಸವಣ್ಣನವರ ಮಹಾಮನೆ ಸಂಸ್ಕೃತಿಯಿಂದ ಕೂಡಿದ ಶರಣ ಪರಂಪರೆಯನ್ನು ಯಥಾವತ್ತಾಗಿ ಮುಂದುವರೆಸಬೇಕೆಂಬ ದೃಢವಾದ ಸಂಕಲ್ಪ ನಮ್ಮದು. ಪ್ರಸ್ತುತ ಯುವ ಜನತೆಯ (ಆಧುನಿಕ ಜನರೇಷನ್ ಅಲ್ಫಾಗೆ) ಬುದ್ದಿಗೆ ಎಟಕುವ ಹಾಗೆ ಶರಣನ ಅಷ್ಟಾವರಣಗಳ ಅರಿವಿನ ಮಾರ್ಗ, ಪಂಚಾಚಾರಗಳ ಆಚಾರ ಮಾರ್ಗ, ಷಟಸ್ಥಲದ ಸಾಧನಾ ಮಾರ್ಗದ ಶರಣ ಜ್ಞಾನವನ್ನು ಬೋಧಿಸಿ ಸರಳವಾದ ಆಚರಣೆಗೆ ಇಂಬುಕೊಡಬೇಕಾಗಿದೆ.

ಕಲ್ಯಾಣ ಮಹಾಮನೆಯ ಶರಣು ಶರಣಾರ್ಥಿ ಮಿಷನ್ ಮೂಲಕ ಭೃತ್ಯಾಚಾರದಡಿಯಲ್ಲಿ ಶರಣ ಸೇವಾದಳವನ್ನು ರಚಿಸಿ ಸಮಾಜ, ದೇಶ, ವಿಶ್ವದ ಏಳಿಗೆಗಾಗಿ ಸಮರ್ಪಕವಾಗಿ ದುಡಿಯಲು ದೇವನಿಗೆ ಮತ್ತು ವಿಶ್ವಗುರು ಬಸವಣ್ಣನವರಿಗೆ ಶರಣಾಗಿ ಸೇವಾ ಭಾವನೆಯಿಂದ ಶರಣ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸಲು ಸನ್ನದ್ದರಾಗಬೇಕಾಗಿದೆ. ತನ್ಮೂಲಕ ಬಸವಾದಿ ಶರಣರ ಮಾರ್ಗವನ್ನು ವಿಶಾಲತೆ ಗೊಳಿಸಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬೇಕಾಗಿದೆ. ಬಂಡವಾಳ ಶಾಹಿತ್ವ, ಉದಾರಿಕರಣ, ರಾಜಕಾರಣ, ಸಾಮಾಜಿಕ ಜಾಲತಾಣದ ಬಿಗಿ ಮುಷ್ಟಿಯಲ್ಲಿ ಬಂದಿತವಾದ ಆಧುನಿಕ ಜಗತ್ತು ಶರಣಜ್ಞಾನ ಮತ್ತು ಮಾನವೀಯತೆಯನ್ನು ದೂರ ತಳ್ಳಿದೆ. ಇಂತಹ ಪ್ರಕ್ಷುಬ್ದ ದಿನಮಾನದಲ್ಲಿ ಸತ್ಯ, ನ್ಯಾಯದ ತಳಹದಿಯ ಮೇಲೆ ಶರಣಜ್ಞಾನ ಮತ್ತು ಮಾನವೀಯತೆಯನ್ನು ಪ್ರಚಾರ ಮಾಡಲೋಸುಗ ವ್ಯಕ್ತಿ ಕೇಂದ್ರಿತ ಸ್ವಾಮಿತ್ವ, ಗುರುತ್ವ, ಅಧ್ಯಕ್ಷತೆ, ಒಡೆತನ ಹೀಗೆ ಸ್ವಯಂ ಪ್ರತಿಷ್ಟೆಯನ್ನು ದೂರ ಸರಿಸಬೇಕಾಗಿದೆ. ಅವರವರ ಪರಿಸ್ಥಿತಿಗನುಗುಣವಾಗಿ ವಿವಿಧ ಉದ್ಯೋಗದಲ್ಲಿ ತೊಡಗಿಸಿಕೊಂಡಿರಬಹುದು ಆದರೆ ಅವರೆಲ್ಲ ವ್ಯಕ್ತಿತ್ವ ಮತ್ತು ಕರ್ತವ್ಯ ಪ್ರಜ್ಞೆಯಿಂದ ಸಮಾನರು ಎಂಬ ಭಾವನೆ ತಂದುಕೊಳ್ಳಬೇಕು. ಈ ರೀತಿಯ ನಮ್ಮೊಟ್ಟಿಗೆ ಕಿಂಕರಭಾವದಿಂದ ಶರಣ ಸೇವಾದಳಕ್ಕೆ ಸೇರಬಯಸುವ ಸಮಸ್ತ ಶರಣಾಜಿಯವರು ಶರಣಜ್ಞಾನ ಪಡೆದು, ಬೇಗ ಬೇಗನೇ ಸದಸ್ಯತ್ವ ಹೊಂದಿರಿ. ಪ್ರತೀ ವಾರ, ತಿಂಗಳು, ವರ್ಷ ನಡೆಯುವ ಶರಣ ಜ್ಞಾನ ಶಿಬಿರಕ್ಕೆ ತಪ್ಪದೇ ಭಾಗವಹಿಸಿರಿ. ನಿರಾಕಾರ ನಿರ್ಗುಣ ಲಿಂಗದೇವನ ಮುಖವೇ ಸಮಾಜವೆಂದು ತಿಳಿದು ಪರಿಪೂರ್ಣ ಜ್ಞಾನಕ್ಕೆ ಶರಣಾಗತರಾಗಿರಿ.


**ಕಲ್ಯಾಣ ಮಹಾಮನೆ ಚಾರೀಟೇಬಲ್ ಟ್ರಸ್ಟ್ (ರಿ)**

**ಕಲ್ಯಾಣ ಮಹಾಮನೆ; ಮಹಾಮಠ, ಗುಣತೀರ್ಥವಾಡಿ –** ಪೋಸ್ಟ್ : ನಾರಾಯಣಪೂರ-585327.

ತಾ॥ ಬಸವಕಲ್ಯಾಣ – ಜಿ॥ ಬೀದರ **Cell: 9663841019, Phone pay: 9480497346**



ರಾಮಲಿಂಗೇಶ್ವರ-9448000710